ಸಾಕ್ಷಿಯನ್ನು ದಿ: 23.01.2026 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿ.ಡಬ್ಲ್ಯೂ-3

**ಪಾಟೀಸವಾಲುಃ- ಪ್ರತಿವಾದಿಗಳ ಪರ ವಕೀಲರಿಂದ:-**

1. ನಾನು ದ್ವಿತೀಯ ಪಿ.ಯು.ಸಿ ಓದಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಪ್ರಸ್ತುತ ದಾವೆಯನ್ನು ಅಶ್ವಿನಿ ಎನ್ನುವವರು ಸಾವಿತ್ರಮ್ಮ ಹಾಗೂ ಅವರ ಗಂಡ ಶ್ರೀಕಂಠೇಗೌಡ, ಅವರ ತಂದೆ ಬಸವರಾಜುರವರ ವಿರುದ್ಧ ಸಲ್ಲಿಸಿರುತ್ತಾರೆ. ಪ್ರತಿವಾದಿಯ ತಾತ ಸಿದ್ಧರಾಮೇಗೌಡ ನನಗೆ ಗೊತ್ತು. ಸದರಿಯವರ ಹೆಂಡತಿ ಚೆನ್ನಮ್ಮ ನನಗೆ ಗೊತ್ತು. ಸದರಿಯವರು ನಮ್ಮ ಪಕ್ಕದ ಮನೆಯರು. ನನ್ನ ತಾಯಿ ಅತ್ತಹಳ್ಳಿಯವರು. ವಾದಿ ಹಾಗೂ ಪ್ರತಿವಾದಿಯರ ನಡುವೆ ಯಾವಾಗ ಪಂಚಾಯಿತಿಯಾಗಿದೆ ಎಂದು ನನಗೆ ಗೊತ್ತಿಲ್ಲ. ವಾದಿಗೆ ಅವರ ತಂದೆ ಜಮೀನು ಕೊಡದೇ ಇದ್ದುದ್ದರಿಂದ ಪಂಚಾಯಿತಿಯಾಗಿರುತ್ತದೆ.

2. 3 ನೇ ಪ್ರತಿವಾದಿಯ ಗಂಡ ನನಗೆ ಸುಮಾರು 15 - 20 ವರ್ಷಗಳಿಂದ ಗೊತ್ತು. ಸಿದ್ಧರಾಮೇಗೌಡರವರು ಮೂಲತಃ ಹೆಚ್ ಬಸಾಪುರದವರು. ಸಿದ್ಧರಾಮೇಗೌಡರವರಿಗೆ 4 ಜನ ಮಕ್ಕಳಿದ್ದಾರೆ ಅವರೆಂದರೆ ಶ್ರೀಕಂಠೇಗೌಡ, ಸರಸ್ವತಿ, ಬಸವರಾಜು ಹಾಗೂ ಪ್ರಮೀಳ. ಸಿದ್ಧರಾಮೇಗೌಡರವರಿಗೆ ಕೇತುಪುರದ ಸರ್ವೆ ನಂ.186 ರಲ್ಲಿ 20 ಗುಂಟೆ ಜಮೀನು ಇರಬಹುದು ಸದರಿ ಆಸ್ತಿ ಸಿದ್ಧರಾಮೇಗೌಡರಿಗೆ ಯಾವ ರೀತಿ ಬಂತು ಎಂದು ನನಗೆ ಗೊತ್ತಿಲ್ಲ. ಅದಕ್ಕೆ ಸಂಬಂಧಪಟ್ಟ ದಾಖಲೆ ನೋಡಿಲ್ಲ. ಸಿದ್ಧರಾಮೇಗೌಡರವರು ಕೇತುಪುರ ಹಾಗೂ ಹೆಚ್ ಬಸಾಪುರ ಎರಡೂ ಕಡೆ ಇರುತ್ತಿದ್ದರು. ಸಿದ್ಧರಾಮೇಗೌಡರವರು ಖಾಯಂ ಆಗಿ ಕೇತುಪುರದಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ಸಿದ್ಧರಾಮೇಗೌಡರವರು ಹೆಚ್ ಬಸಾಪುರದಲ್ಲಿ ವಾಸವಾಗಿದ್ದರು ಎಂಬುದಕ್ಕೆ ಸಂಬಂಧಪಟ್ಟ ಪಡಿತರ ಚೀಟಿ ಅಥವಾ ಚುನಾವಣಾ ಪಟ್ಟಿ ನೋಡಿರುವುದಿಲ್ಲ.

3. ನಿಪಿ.1 ವಂಶವೃಕ್ಷವು 1 ನೇ ಪ್ರತಿವಾದಿಯ ಕುಟುಂಬಕ್ಕೆ ಸಂಬಂಧಿಸಿದ್ದು ಎಂದರೆ ಸರಿ. ಸದರಿಯವರು ಕೇತುಪುರದಲ್ಲಿ ಪ್ರತ್ಯೇಕವಾಗಿ ವಾಸವಾಗಿದ್ದಾರೆಂದರೆ ಸರಿ. ನಿಪಿ.1 ರ ಪ್ರಕಾರ ಶ್ರೀಕಂಠೇಗೌಡ ಹಾಗೂ ಬೇರೆಯವರು 1 ನೇ ಪ್ರತಿವಾದಿ ಕುಟುಂಬದ ಸದಸ್ಯರಲ್ಲ ಎಂದರೆ ಸರಿ. 1 ನೇ ಪ್ರತಿವಾದಿಗೆ ಕೇತುಪುರದಲ್ಲಿ ಎಷ್ಟು ಆಸ್ತಿಯಿತ್ತು ಎಂದು ನನಗೆ ಗೊತ್ತಿಲ್ಲ. 1 ನೇ

ಪ್ರತಿವಾದಿಗೆ ಹೆಚ್ ಬಸಾಪುರದಲ್ಲಿ ಸರ್ವೆ ನಂ.27/2 ರಲ್ಲಿ 30 ಗುಂಟೆ ಆಸ್ತಿಯಿದೆ. ಸದರಿ ಆಸ್ತಿಯು ಸಿದ್ದರಾಮೇಗೌಡರ ಪಿತ್ರಾರ್ಜಿತ ಆಸ್ತಿಗಳ ಪಾಲು ವಿಭಾಗದಲ್ಲಿ ಒಂದನೇ ಪ್ರತಿವಾದಿಗೆ ಬಂದಿರುತ್ತದೆ. ವಾದಿ ಹಾಗೂ ಪ್ರತಿವಾದಿಯರ ನಡುವೆ ಆದ ಪಂಚಾಯಿತಿಗೆ ನಾನು ಹಾಗೂ ವಿಜಯ್ ಕುಮಾರ್ ಸೇರಿದ್ದೆವು.

4. ಸಿದ್ದರಾಮೇಗೌಡರವರ ಹೆಂಡತಿ ಚೆನ್ನಮ್ಮ ನಮ್ಮ ಸಂಬಂಧಿಕರಲ್ಲ. ಸಿದ್ದರಾಮೇಗೌಡರವರು ಅವರ ಆಸ್ತಿಗೆ ಸಂಬಂಧಿಸಿ ಯಾವ ವ್ಯವಹಾರ ಮಾಡಿದ್ದರೆಂದು ನನಗೆ ಗೊತ್ತಿಲ್ಲ. ಸದರಿ ಪಾಲು ವಿಭಾಗದಲ್ಲಿ ಬಂದ ಆಸ್ತಿಯನ್ನು 1 ನೇ ಪ್ರತಿವಾದಿ ದಿಃ 08.02.1993 ರಂದು 3 ನೇ ಪ್ರತಿವಾದಿಗೆ ಮಾರಾಟ ಮಾಡಿರುವುದು ಗೊತ್ತಿಲ್ಲ. ಅದರಂತೆ 3 ನೇ ಪ್ರತಿವಾದಿ ಸದರಿ ಆಸ್ತಿಯ ಮಾಲೀಕರಾಗಿ ಅದಕ್ಕೆ ಸಂಬಂಧಪಟ್ಟ ಖಾತೆ ಮತ್ತು ಪಹಣಿಯನ್ನು ಬದಲಾವಣೆ ಮಾಡಿಸಿಕೊಂಡು ಅದರಲ್ಲಿ ಮನೆ ಕಟ್ಟಿಕೊಂಡು ಅದರ ಸ್ವಾಧೀನದಲ್ಲಿದ್ದಾರೆಂದೆ ಸರಿ. ದಾವಾ ಷೆಡ್ಯೂಲ್ 1 ನೇ ಆಸ್ತಿಯಲ್ಲಿ ವಾದಿ ಹಾಗೂ ಅವರ ಸಹೋದರನಾದ 2 ನೇ ಪ್ರತಿವಾದಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯ ಹೆಸರಿನಲ್ಲಿರುವ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಯಾವುದೇ ಪಂಚಾಯಿತಿ ನಡೆಯದಿದ್ದರೂ ವಾದಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ